**<u>3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಸತ್ರ ಪ್ರಕರಣ ಸಂಖ್ಯೆಃ 46/2023</u>**

ದಿನಾಂಕಃ 15.01.2025
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)
ದೋ.ಪ. -8 ಅ.ಸಾ -7

| | | |
|---|---|---|
| ಹೆಸರು | ಃ | ಶ್ರೀ. ರಘು ಎನ್ ಎಸ್ |
| ತಂದೆಯ ಹೆಸರು | ಃ | ಸಿದ್ದಲಿಂಗರಾವ್ |
| ವಯಸ್ಸು | ಃ | 36 ವರ್ಷ |
| ಉದ್ಯೋಗ | ಃ | ಪುರೋಹಿತರು |
| ವಾಸಸ್ಥಳ | ಃ | ನುಣ್ಣೂರು |

**<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ನನಗೆ ಶಿವು ಮತ್ತು ಆರೋಪಿಗಳು ಗೊತ್ತು. ಶಿವು ಆರೋಪಿ-1 ರವರ ಅಪ್ರಾಪ್ತೆ ಮಗಳನ್ನು ಕರೆದುಕೊಂಡು ಹೋಗಿದ್ದ ವಿಚಾರ ನನಗೆ ಗೊತ್ತು. ನಂತರ ಈ ವಿಚಾರವಾಗಿ ಏನು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಶಿವು ಮೃತನಾಗಿದ್ದು ಆದರೆ ಹೇಗೆ ಮತ್ತು ಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಶಿವು ಮರಣ ಹೊಂದಿದ್ದಾಗ ಊರ ಒಳಗಿನ ಅವರ ಮನೆಯಲ್ಲಿ ವಾಸ ಇದ್ದ. ಈ ಪ್ರಕರಣ ಕುರಿತು ನನಗೆ ಏನು ಗೊತ್ತಿಲ್ಲ. ಸಾಕ್ಷಿ ದಿನಾಂಕ 30.10.2022 ರ ಪಂಚನಾಮೆಯಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು **ನಿಪಿ-11** ಎಂದು ಮತ್ತು ಸಾಕ್ಷಿ ಸಹಿಯನ್ನು **ನಿಪಿ-11** ಎ ಎಂದು ಗುರುತಿಸಲಾಯಿತು. ಶಿವು ಮರಣದ ನಂತರ ಸುಮಾರು 15 ದಿವಸದಲ್ಲಿ ಬೆಳಗ್ಗೆ 12.00 ಗಂಟೆ ಸಮಯಕ್ಕೆ ಪೋಲಿಸರು ಆರೋಪಿ-2 ಮತ್ತು 3 ರವರನ್ನು ಕರೆದುಕೊಂಡು ಬಂದಿದ್ದು ನನ್ನನ್ನು ಕರೆದು ಸಹಿ

ಹಾಕಿಸಿಕೊಂಡಿದ್ದು ಸ್ಥಳದಲ್ಲಿ ಪೋಟೋಗಳನ್ನು ತೆಗೆದಿರುತ್ತಾರೆ. ಸಾಕ್ಷಿ 2 ಪೋಟೋಗಳಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದು ಸದರಿ ಪೋಟೋಗಳನ್ನು **ನಿಪಿ-12 ಮತ್ತು 13** ಎಂದು ಗುರುತಿಸಲಾಯಿತು.

ಪೋಲಿಸರು ಕೊಲೆ ಸಂಬಂಧವಾಗಿ ಆರೋಪಿಗಳನ್ನು ಕರೆದುಕೊಂಡು ಬಂದಿದ್ದಾಗಿ ಹೇಳಿದ್ದರು. ಈ ಪ್ರಕರಣ ಕುರಿತು ಪೊಲೀಸರು ನನಗೆ ವಿಚಾರಿಸಿಲ್ಲ ಮತ್ತು ನಾನು ಕೂಡ ಯಾವುದೇ ಹೇಳಿಕೆ ನೀಡಿಲ್ಲ. ಈ ಪ್ರಕರಣ ಕುರಿತು ನನಗೆ ಬೇರೆ ಏನು ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಅಭಿಯೋಜಕರು ಕೋರಿರುತ್ತಾರೆ. ವಾದ ಆಲಿಸಿರುತ್ತದೆ. ಪ್ರಕರಣದ ಕಡತವನ್ನು ಪರಿಶೀಲಿಸಿದ್ದು ಸಾಕ್ಷಿ ತನ್ನ ದಿನಾಂಕ 30.10.2022 ರ ಹೇಳಿಕೆ ಮತ್ತು ನಿಪಿ-11 ಮಹಜರ್ ಪ್ರಕಾರ ಸಾಕ್ಷ್ಯ ಹೇಳದೇ ಇರುವುದು ಕಂಡುಬಂದಿದ್ದು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ಆರೋಪಿ-1 ಮೃತ ಶಿವು ಮೇಲೆ ತನ್ನ ಅಪ್ರಾಪ್ತ ಮಗಳ ಸಂಬಂಧವಾಗಿ ದ್ವೇಷ ಸಾಧಿಸುತ್ತಿದ್ದು ಶಿವು ಗೆ ಒಂದು ಗತಿ ಕಾಣಿಸುತ್ತೇನೆಂದು ಹೇಳುತ್ತಿದ್ದರು ಎನ್ನುವುದು ಸರಿ ಅಲ್ಲ. ಶಿವು ಕೊಲೆಯಾಗುವುದಕ್ಕೆ 10 ದಿನ ಮೊದಲಿನಿಂದ ಊರಿನಲ್ಲಿ ವಾಸ ಇದ್ದರು ಎನ್ನುವುದು ಸರಿ ಇದೆ. ದಿನಾಂಕ 28.10.2022 ರ ರಾತ್ರಿ 11.00 ಗಂಟೆ ಸಮಯಕ್ಕೆ ಆರೋಪಿ-1 ರಿಂದ 3 ರವರು ಮೋಟಾರ್ ಸೈಕಲ್‌ಗಳಲ್ಲಿ ಶಿವು ಮನೆ ಬಳಿ ಬಂದಿದ್ದರು ಎನ್ನುವುದು ಸರಿ ಅಲ್ಲ. ಆರೋಪಿ-1 ಶಿವು

ನ ಎರಡು ಕೈಗಳನ್ನು ಗಟ್ಟಿಯಾಗಿ ಅಪ್ಪಿ ಹಿಡಿದುಕೊಂಡಿದ್ದು, ಆರೋಪಿ-2 ಮತ್ತು 3 ತಂದಿದ್ದ ಮರದ ತುಂಡುಗಳಿಂದ ಶಿವು ತಲೆ ಮತ್ತು ಮೈ ಕೈ ಕಾಲುಗಳಿಗೆ ಹೊಡೆದರು ಎನ್ನುವುದು ಸರಿ ಅಲ್ಲ.

ನಂತರ ಆರೋಪಿ-2 ಮತ್ತು 3 ರವರು ಶಿವುನನ್ನು ಮೋಟಾರ್ ಸೈಕಲ್ ಮಧ್ಯ ಕೂರಿಸಿಕೊಂಡು ಇಗ್ಗಲೂರು ಕಡೆಗೆ ಹೋಗಿದ್ದು ನಾವು ಶಿವು ತಾಯಿಗೆ ಪೋಲಿಸ್ ಠಾಣೆಗೆ ಹೋಗಿರಬಹುದು ಎಂದು ಸಮಾಧಾನ ಮಾಡಿದ್ದೆವು ಎನ್ನುವುದು ಸರಿ ಅಲ್ಲ. ದಿನಾಂಕ 29.10.2022 ರ ಬೆಳಗಿನ ಜಾವ ಸುಮಾರು 2.30 ರ ಸಮಯಕ್ಕೆ 112 ಸಹಾಯ ವಾಣಿ ಮೊಬೈಲ್ ನ ಪೋಲಿಸರು ಶಿವು ತಾಯಿ ಮನೆ ಬಳಿ ಬಂದಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಸ್ಥಳದಲ್ಲಿ ಆರೋಪಿ-1 ಇದ್ದು ಆತನಿಗೆ ಪೋಲಿಸರು ಶಿವು ಕರೆಸುವಂತೆ ಬುದ್ಧಿ ಹೇಳಿದ್ದು ಕರೆಸುವುದಾಗಿ ಹೇಳಿದ್ದರು ಎನ್ನುವುದು ಸರಿ ಅಲ್ಲ. ದಿನಾಂಕ 29.10.2022 ರ ಬೆಳಿಗ್ಗೆ 6.30 ರ ಸಮಯಕ್ಕೆ ಶಿವು ಹೆಣ ನೇರಳೂರು ಗ್ರಾಮದ ತಮ್ಮಣ್ಣನ ತೋಟದಲ್ಲಿ ಬಿದ್ದಿದೆ ಎಂದು ಗ್ರಾಮದವರು ಹೋಗುತ್ತಿದ್ದು ನಾನು ಹೋಗಿ ನೋಡಿದ್ದು ಶಿವು ಹೆಣದ ಮೇಲೆ ಕೇವಲ ಪ್ಯಾಂಟ್ ಇದ್ದು ಮೈ ಮೇಲೆ ಮಣ್ಣು ಅಂಟಿಕೊಂಡಿತ್ತು ಎನ್ನುವುದು ಸರಿ ಅಲ್ಲ. ದಿನಾಂಕ 30.10.2022 ರಂದು ಮೇಲೆ ಸೂಚಿಸಿದಂತೆ ನಡೆದಿರುವುದರ ಕುರಿತು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿ ಅಲ್ಲ. ಹೇಳಿಕೆಯನ್ನು **ನಿಪಿ-14** ಎಂದು ಗುರುತಿಸಲಾಯಿತು. ನನಗೆ ನಮ್ಮೂರಿನ ಶಿವು ಕೊಲೆ ಆದ ಬಗ್ಗೆ

ಎಲ್ಲಾ ಗೊತ್ತಿದ್ದರು ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ.

ದಿನಾಂಕ 30.10.2022 ರ ಸಾಯಂಕಾಲ 5.45 ರಿಂದ 6.30 ರವರೆಗೆ ಮೃತ ಶಿವು ಮನೆಯ ಬಳಿ ಆರೋಪಿ-2 ಮತ್ತು 3 ತೋರಿಸಿದ ಸ್ಥಳದಲ್ಲಿ ನಮ್ಮ ಮುಂದೆ ಪಂಚನಾಮೆ ಮಾಡಿದ್ದು ಓದಿ ಸಹಿ ಹಾಕಿರುತ್ತೇನೆ ಎನ್ನುವುದು ಸರಿ ಅಲ್ಲ.

**ಪಾಟೀ ಸವಾಲುಃ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ರಾಘವೇಂದ್ರ. ಜಿ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.